# ಧರ್ಮ ಶ್ರವಣವಿದೇತಕೇ ಮೂರ್ಖಗೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 296.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the book of Prof. S.K. Ramachandra Rao.
3. **Note:** Singer has followed these lyrics.

ರಾಗ: ಧನ್ಯಾಸಿ ತಾಳ: ಆದಿ

ಧರ್ಮ ಶ್ರವಣವಿದೇತಕೇ ಮೂರ್ಖಗೆ || ಪ ||

ಕರ್ಮಾನುಷ್ಠಾನವನೆಸಗದಿರುವ
ದುರ್ಮತಿಗೇತಕೆ ಬ್ರಾಹ್ಮಣ ಜನ್ಮ || ಅಪ ||

ಕೋಣಗೆ ವೀಣಾಗಾನವಿದೇತಕೆ
ಮಾಣಿಕ್ಯವೇತಕೆ ಮರ್ಕಟಗೆ
ತ್ರಾಣವು ತೊಲಗಿದ ಹೆಣ್ಣಿಗಿದೇತಕೆ ಕ-
ಟ್ಟಾಣಿ ಮುತ್ತಿನ ಹಾರವು ಕೊರಳಿಗೆ || 1 ||

ಷಡುರಸ ಅನ್ನವಿದೇತಕೆ ಗರ್ದಭ
ಉಡುಗೊರೆ ಸಹಿತಲೆ ಶ್ವಾನನಿಗೆ
ಕಡು ವೃದ್ಧಗೆ ಮೈನೆರೆದ ಹೆಣ್ಣಿನ
ಒಡನೆ ಭೋಗಿಪೆನೆಂಬಭಿಲಾಷೆಯೇಕೆ || 2 ||

ಹುಟ್ಟು ಕುರುಡಗೆ ದೀಪವಿದೇತಕೆ
ಭ್ರಷ್ಟನಿಗೇತಕೆ ಕುಲ ಧರ್ಮ
ಸೃಷ್ಟಿಯೊಳಧಮಗೆ ಪುರಂದರ ವಿಠಲನ
ಮುಟ್ಟಿ ಭಜಿಪೆನೆಂಬ ಅಭಿಲಾಷೆಯೇತಕೆ || 3 ||

**Classification:** Mundige
**Ankita:** purandara vittala
**Location:** NA
**Category:** Jeevanoddhara
**Sub-Category:** dharma, murkha, karma, brahmana, kONa, kOti, hennu, anna, katte, nayi, huttu, deepa, bhajane,
**Pravachana:** NA
**Explanation:** NA